(ii) Inconveniences caused to Members in the Legislators Home.

ಶ್ರೀ ಭೀಮಣ್ಣ ಖಂಡ್ರೆ (ಬಾಲ್ಕಿ).—ಸ್ವಾಮಿ, ಶಾಸಕರ ಭವನದಲ್ಲಿ ಫೋನ್ ಕೆಟ್ಟುಹೋಗಿ ೬ ತಿಂಗಳು ಆಯಿತು. ನಾವು ಈ ಬಗ್ಗೆ ವಿಧಾನ ಮಂಡಲದ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆದಿದ್ದೇವೆ. ತಮಗೂ ಕೂಡ ಇದನ್ನು ಹೇಳಿದ್ದೇವೆ. ದೂರದಿಂದ ಬರತಕ್ಕಂಥ ಟ್ರಂಕಾಲ್ ನವುಗೆ ಮುಟ್ಟುತ್ತಾ ಇಲ್ಲ. ಇದನ್ನು ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಅಧ್ಯಕ್ಷರು.—ನಾನು ನಿನ್ನೆ ತಾನೇ ಟೆಲಿಫೋನ್ ಅಥಾರಿಟಿಗೆ ಸಂಬಂಧಪಟ್ಟಂಥ ಅಧಿಕಾರಿಗಳನ್ನು ಕರೆಸಿ ಮಾತನಾಡಿದ್ದೇನೆ. ಈಗ ಇನ್ನೂ ಒಂದು ಬೋರ್ಡ್ ಕೂಡ ಆಗುತ್ತಾ ಇದೆ ಅದರಲ್ಲಿ ೪೦ ಜನ ಮಾತ್ರ ಮಾತನಾಡಬಹುದು. ಇವರು ಮಾತನಾಡತಕ್ಕಂಥ ಕಾಲದಲ್ಲಿ ಬೇರೆಯವರು ಫೋನ್‌ನಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡಿದರೆ ಅದು ಸಾಧ್ಯವಾಗುವುದಿಲ್ಲ. ದೊಡ್ಡ ದೊಡ್ಡ ಹೋಟಲ್‌ಗಳಲ್ಲಿ, ಗೌರ್ನಮೆಂಟ್ ಆಫೀಸ್‌ಗಳಲ್ಲಿ ಈ ವಿಧಾನವನ್ನು ಅನುಸರಿಸುವುದಕ್ಕೆ ಹೇಳಿದ್ದಾರೆ. ಇನ್ನು ಲೋಪದೋಷಗಳನ್ನು ಸರಿಪಡಿಸುವ ಬಗ್ಗೆ ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಅವರು ಅದನ್ನು ಸರಿಪಡಿಸುತ್ತಾರೆ. ಇದರಲ್ಲಿ ತಮ್ಮ ಅಭಿಲಾಷೆಯನ್ನು ನೆರವೇರಿಸುವುದಕ್ಕೆ ನಾನು ಸರ್ವ ಪ್ರಯತ್ನವನ್ನು ಮಾಡಿದ್ದೇನೆ. ಈಗ ಮಾನ್ಯ ಬಸವಲಿಂಗಪ್ಪನವರು ಮಾತನಾಡಲಿ.

ಶ್ರೀ ಯು. ಬಿ. ಬೋರ್‌ಕರ್.—ಸ್ವಾಮಿ, ೯ನೇ ನಂಬರ್‌ಗೆ ಫೋನ್ ಮಾಡಿದರೆ ರಿಸೀವ್ ಮಾಡುವುದಿಲ್ಲ. ಇದನ್ನು ತಾವು ನೋಡಬೇಕು.

ಅಧ್ಯಕ್ಷರು.—ನಾನು ಈಗ ಮಾನ್ಯ ಬಸವಲಿಂಗಪ್ಪನವರನ್ನು ಕರೆದಿದ್ದೇನೆ. ಅವರು ಮಾತನಾಡಲಿ, ತಾವು ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಸ್ವಾಮಿ, ತಳೆದುಹೋದ ವಿಧಾನ ಸಭಾಧಿವೇಶನದಲ್ಲಿ ವಿಧಾನಸಭೆಯ ನಡವಳಿಕೆಯ ನಿಯಮಗಳೇನಿವೆ ಅವರಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡುವುದಕೆ ಒಂದು ಸಮಿತಿಯನ್ನು ನೇಮಿಸಿದ್ದರು. ಬಹಳ ದಿವಸ ಆ ಸಮಿತಿ ಕಾರ್ಯಾಚರಣೆ ಮಾಡಿತು. ನಾನು ಒಬ್ಬ ಮಂತ್ರಿಯಾಗಿ ಮತ್ತು ಸದಸ್ಯನಾಗಿ ಸಮಿತಿಗೆ ಹಾಜರಾಗುತ್ತಿದ್ದೆ. ಅದು ಈಗ ಏನಾಯಿತೋ ಗೊತ್ತಿಲ್ಲ. ಇಲ್ಲಿ ನಾವು ಕೇಳತಕ್ಕಂಥ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರವನ್ನು ಒದಗಿಸುವುದರಲ್ಲಿ ಬಹಳ ವಿಳಂಬವಾಗುತ್ತಿದೆ. ಈ ಬಗ್ಗೆ ಹಲವಾರು ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಬೇಡಿಕೆಗಳನ್ನು ನಿಮ್ಮ ಮುಂದೆ ಇಟ್ಟಿದ್ದಾರೆ. ಅವರು ಯಾವಾಗ ನನ್ನ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದೂ ಆಯಿತು, ತಾವು ಅದಕ್ಕೆ ಸರ್ಕಾರದಿಂದ ಉತ್ತರ ಬಂದಕೂಡಲೇ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೂ ಆಯಿತು. ಸರ್ಕಾರದವರು ಮಾನ್ಯ ಸದಸ್ಯರುಗಳ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕಾದರೆ ಅವರ ಸಮಯವನ್ನು ಅವರು ತೆಗೆದುಕೊಳ್ಳುತ್ತಾರೆ. ಬಹಳ ವರ್ಷಗಳಿಂದ ಆ ನಿಯಮಗಳು ಹಾಗೆಯೇ ಇವೆ. ಈ ನಿಯಮಗಳನ್ನು ತಿದ್ದುಪಡಿ ಮಾಡುವುದಕ್ಕೆ ಹಿಂದೆ ಒಂದು ಕಮಿಟಿ ಆಗಿತ್ತು ಆದು ಈಗ ಇಲ್ಲವೆಂದು ಕಾಣುತ್ತದೆ. ಆದ್ದರಿಂದ ಪುನಃ ಸಮಿತಿಯನ್ನು ಮಾಡಿ ಕೆಲವು ನಿಯಮಗಳಿಗೆ ತಿದ್ದುಪಡಿಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಹಿಂದೆ ಸಮಿತಿಯವರು ಬಹಳ ಸಾರಿ ಸಭೆಯನ್ನು ಮಾಡಿದರೂ ಕೂಡ ಅರ್ಧಬರ್ಧ ಕೆಲಸ ಮಾಡಿದ್ದಾರೆ. ಅದನ್ನು ಪೂರ್ಣವಾಗಿ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ರಾಮಭಟ್ (ಪುತ್ತೂರು).—ಸ್ವಾಮಿ, ಈಗ ಮೊದಲನೇ ವರ್ಷದ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಆಗಿರತಕ್ಕಂಥ ತೊಂದರೆಯ ಬಗ್ಗೆ ನಾನು ರೂಲ್ ೩೧೨ರ ಪ್ರಕಾರ ನೋಟೀಸ್ ಕೊಟ್ಟಿದ್ದೇನೆ. ನಿನ್ನೆ ಕೂಡ ತಾವು ಮಾನ್ಯ ವಿದ್ಯಾಮಂತ್ರಿಗಳಿಂದ ಒಂದು ಸ್ಟೇಟ್‌ಮೆಂಟ್ ಕೊಡಿಸುತ್ತೇನೆಂದು ಹೇಳಿದ್ದೀರಿ. ಇವತ್ತು ಮಾನ್ಯ ವಿದ್ಯಾಮಂತ್ರಿಗಳು ಇಲ್ಲ. ಈ ಬಗ್ಗೆ ಏನು ಮಾಡಿದ್ದೀರಿ ಎಂಬುದನ್ನು ತಾವು ಹೇಳಬೇಕು.

ಅಧ್ಯಕ್ಷರು.—ನಾನು ಈ ಬಗ್ಗೆ ಉತ್ತರವನ್ನು ತರಿಸುತ್ತೇನೆ.